# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಸ.ಅ/ವಾರ್ಡ್ ಸಭೆ/186/ಸಭೆ-02/2020-21 ದಿನಾಂಕ:18.09.2021.

## ಜರಗನಹಳ್ಳಿ ವಾರ್ಡ್ ನಂ 186ರಲ್ಲಿ ನಡೆದ ಸಭೆಯ ನಡಾವಳಿಗಳು

ದಿನಾಂಕ 18.09.2021. ರಂದು ಅರಕೆರೆ ಉಪವಿಭಾಗದ ವಾರ್ಡ್ ನಂ 186 ರ ಜರಗನಹಳ್ಳಿ ವ್ಯಾಪ್ತಿಯ ಜರಗನಹಳ್ಳಿ ವಾರ್ಡ್ ಕಛೇರಿಯಲ್ಲಿ ಶ್ರೀ ಡಾ॥ ರವಿ, ನೋಡಲ್ ಅಧಿಕಾರಿಗಳು, ಜರಗನಹಳ್ಳಿ ವಾರ್ಡ್ ನಂ 186 ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡಾವಳಿ.

ಹಾಜರಿದ್ದವರು.

| ಕ್ರಮ ಸಂ | ಸದಸ್ಯರ ಹೆಸರು | ಪದನಾಮ / ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀ ಡಾ॥ ರವಿ, | ನೋಡಲ್ ಅಧಿಕಾರಿಗಳು ವಾರ್ಡ್ ನಂ 186. | ಹಾಜರಿದ್ದರು. |
| 2 | ಶ್ರೀ ನರಸಿಂಹಮೂರ್ತಿನಾಯಕ್ | ಕಾರ್ಯದರ್ಶಿಗಳು | ಹಾಜರಿದ್ದರು. |
| 3 | ನರೇಶ್ | ಆರೋಗ್ಯ ಪರಿವೀಕ್ಷಕರು | ಹಾಜರಿದ್ದರು |
| 4 | ಶಿವಣ್ಣ | ಸ್ಥಳೀಯ ನಿವಾಸಿಗಳು | ಹಾಜರಿದ್ದರು |
| 5 | ಕುಮಾರ್ | ಸ್ಥಳೀಯ ನಿವಾಸಿಗಳು | ಹಾಜರಿದ್ದರು |
| 6 | ಮಾಯಪ್ಪ | ಸ್ಥಳೀಯ ನಿವಾಸಿಗಳು | ಹಾಜರಿದ್ದರು. |
| 7 | ಬಸವರಾಜು | ಸ್ಥಳೀಯ ನಿವಾಸಿಗಳು | ಹಾಜರಿದ್ದರು. |
| 8 | ಕಿರಣ್‌ಕುಮಾರ್ | ಸ್ಥಳೀಯ ನಿವಾಸಿಗಳು | ಹಾಜರಿದ್ದರು |
| 9 | ಆರ್. ವಿಶ್ವನಾಥ್ | ಸ್ಥಳೀಯ ನಿವಾಸಿಗಳು | ಹಾಜರಿದ್ದರು |

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು/ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

| | |
|---|---|
| ವಿಷಯ-01 | ಹಿಂದಿನ ಸಭೆಯ ನಡವಳಿಯನ್ನು ಓದಿ ರೆಕಾರ್ಡ್ ಮಾಡುವುದು. |
| ತೀರ್ಮಾನ | ಹಿಂದಿನ ಸಭೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ವಿಷಯ ಮತ್ತು ತೀರ್ಮಾನವನ್ನು ಓದಿ ರೆಕಾರ್ಡ್ ಮಾಡಲಾಯಿತು. |

1. <u>ಆರೋಗ್ಯ/ಘನ ತ್ಯಾಜ್ಯ ಇಲಾಖೆ :-</u> ವಾರ್ಡ್ ವ್ಯಾಪ್ತಿಯಲ್ಲಿ ಸಮರ್ಪಕವಾಗಿ ಕಸವಿಲೇವಾರಿಯ ಬಗ್ಗೆ ಮಾಹಿತಿಯನ್ನು ಕಿರಿಯ ಆರೋಗ್ಯ ನೀಡಿದರು ಹಾಗೂ ಹಾಲಿ ವಾರ್ಡ್ ವ್ಯಾಪ್ತಿಯಲ್ಲಿ ಇರುವ ಘನ ತ್ಯಾಜ್ಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಭೆಗೆ ತಿಳಿಸಿದರು.

ಘನ ತ್ಯಾಜ್ಯವನ್ನು ಹಸಿ ಕಸ, ಒಣ ಕಸಗಳನ್ನು ಬೇರ್ಪಡಿಸಿ ಆಟೋಗಳಿಗೆ ನೀಡುವ ಬಗ್ಗೆ ಅರಿವು ಮೂಡಿಸಲು ಸಂಬಂಧಪಟ್ಟ ಇಲಾಖೆರವರು ಕ್ರಮಕೈಗೊಳ್ಳುವ ಬಗ್ಗೆ ಚರ್ಚಿಸಿದರು ಹಾಗೂ ಬೀದಿ ನಾಯಿಗಳನ್ನು ನಿಯಂತ್ರಿಸಲು ಕ್ರಮಕೈಗೊಳ್ಳಲು ಕೋರಿದರು.

2. **ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ –19ರ ಬಗ್ಗೆ ಚರ್ಚಿಸುವುದು:–** ಪ್ರತಿ ದಿನ ಸುಮಾರು 2000 ರಿಂದ 3000 ಜನರಿಗೆ ಲಸಿಕೆಯನ್ನು ನೀಡಲಾಗಿರುತ್ತದೆ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲಾಗಿದೆ.

3. **ಕಾಮಗಾರಿ ಇಲಾಖೆ:–** ವಾರ್ಡ್ ವ್ಯಾಪ್ತಿಯಲ್ಲಿ ಬಿದ್ದಿರುವ ರಸ್ತೆಗುಂಡಿಗಳನ್ನು ಮುಚ್ಚುವುದರ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

4. **ಕಂದಾಯ ಇಲಾಖೆ:–** 2020–21ನೇ ಸಾಲಿನಲ್ಲೆ 8.30 ಕೋಟಿಗಳಷ್ಟು ಕಂದಾಯ ವಸೂಲಿ ಮಾಡಬೇಕಾಗಿರುತ್ತದೆ ಆದರೆ ಸುಮಾರು 3.50 ಕೋಟಿಯಷ್ಟು ಕಂದಾಯ ವಸೂಲಿಯಾಗಿರುವುದಾಗಿ ಹಾಗೂ ಸುಮಾರು 200 ಮನೆಗಳಿಗೆ ಕರ ವಸೂಲಿ ಮಾಡಲು ನೋಟೀಸ್ ಜಾರಿ ಮಾಡಿರುವುದಾಗಿ ಕಂದಾಯ ವಸೂಲಿಗಾರರು ಸಭೆಯಲ್ಲಿ ತಿಳಿಸಿದರು.
5. **ಸಂಚಾರಿ ವಿಭಾಗ:–** ಮುನಿಸಂಜೀವಪ್ಪ ಬಡಾವಣೆ ಮುಖ್ಯ ರಸ್ತೆ, ಬುಲೆಟ್ ಶೋ ರೂಂ ಹತ್ತಿರದ ರಸ್ತೆಯಲ್ಲಿ ಅನಧಿಕೃತವಾಗಿ ವಾಹನವನ್ನು ನಿಲ್ಲಿಸಿರುವದರಿಂದ ಸಾರ್ವಜನಿಕರು ಓಡಾಡಲು ಅಡಚಣೆಯುಂಟಾಗಿರುವುದರಿಂದ ತಕ್ಷಣವೇ ತೆರವುಗೊಳಿಸಲು ಸಂಬಂಧಪಟ್ಟವರಿಗೆ ಸೂಚಿಸಲಾಯಿತು.
6. **ಬೆಂಗಳೂರು ನೀರು ಮತ್ತು ಒಳಚರಂಡಿ ಮಂಡಳಿ:–**ಬಿಡ್ಲೂಎಸ್‌ಎಸ್‌ಬಿ ವತಿಯಿಂದ ಎಲ್ಲಂದರಲ್ಲಿ ವಾರ್ಡ್ ರಸ್ತೆಗಳನ್ನು ಅಗೆದು ಸರಿಯಾಗಿ ಮುಚ್ಚದೇ ಇರುವುದರಿಂದ ವಿಪರೀತ ಗುಂಡಿಗಳು ಬಿದ್ದಿದ್ದು ಸಾರ್ವಜನಿಕರು ಮತ್ತು ವಾಹನ ಸವಾರರಿಗೆ ತುಂಬಾ ತೊಂದರೆಯಾಗುತ್ತಿರುವುದಾಗಿ ತಿಳಿಸಿ ಚರ್ಚಿಸಿದರು.
7. **ಬೆಂಗಳೂರು ವಿದ್ಯುತ್ ಸರಬರಾಜು ಮಂಡಳಿ:–** ಬೆಸ್ಕಾಂ ವತಿಯಿಂದ ಎಲ್ಲಂದರಲ್ಲಿ ವಾರ್ಡ್ ರಸ್ತೆಗಳನ್ನು ಅಗೆದು ಸರಿಯಾಗಿ ಮುಚ್ಚದೇ ಇರುವುದರಿಂದ ವಿಪರೀತ ಗುಂಡಿಗಳು ಬಿದ್ದಿದ್ದು ಸಾರ್ವಜನಿಕರು ಮತ್ತು ವಾಹನ ಸವಾರರಿಗೆ ತುಂಬಾ ತೊಂದರೆಯಾಗುತ್ತಿರುವುದಾಗಿ ತಿಳಿಸಿ ಚರ್ಚಿಸಿದರು.

ಕಾರ್ಯದರ್ಶಿಯವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

( ನರಸಿಂಹಮೂರ್ತಿನಾಯಕ್)
ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು
ವಾರ್ಡ್ ನಂ 186, ಜರಗನಹಳ್ಳಿ

( ಡಾ|| ರವಿ )
ನೋಡಲ್ ಅಧಿಕಾರಿ,
ವಾರ್ಡ್ ನಂ 186